<u>ಸಾಕ್ಷಿಗೆ ದಿನಾಂಕ *13.02.2026* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು : ಎದರುದಾರರ ಪರ ಶ್ರೀ ಎನ್ ಜೆ ಆರ್ ವಕೀಲರಿಂದ</u>

ಮೃತ ತಿಮ್ಮಣ್ಣ ರವರು ನನ್ನ ಗಂಡ. ಅವರು ತೀರಿಕೊಂಡಾಗ ಅವರಿಗೆ 50 ವರ್ಷ ವಯಸ್ಸು ಆಗಿತ್ತು. ನನಗೆ 48 ವರ್ಷ ವಯಸ್ಸು ಇರುತ್ತದೆ. 2 ಮತ್ತು 3 ನೇ ಅರ್ಜಿದಾರರು ನನ್ನ ಮಕ್ಕಳು. ನನ್ನ ಗಂಡ ಗ್ಯಾರೇಜಿನಲ್ಲಿ ಕೆಲಸ ಮಾಡುತ್ತಿದ್ದನು ಮತ್ತು ಸಮಯ ಸಿಕ್ಕಾಗ ಕೃಷಿ ಕೆಲಸ ಮಾಡುತ್ತಿದ್ದರು. ನನ್ನ ಗಂಡನದು ಗ್ಯಾರೇಜ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಮ್ಮ ಮನೆತನಕ್ಕೆ ಯಾವುದೇ ಜಮೀನು ಇರುವುದಿಲ್ಲ. ನನ್ನ ಗಂಡ ಗ್ಯಾರೇಜ ಮಾಲೀಕ ಮತ್ತು ಒಕ್ಕಲುತನ ಕೆಲಸ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಅಂಗವಿಕಲ ಇದ್ದರು ಎಂದರೆ ಸರಿಯಲ್ಲ. ಅಪಘಾತವಾದ ದಿನ ನನ್ನ ಗಂಡ 3 ಚಕ್ರದ ವಾಹನದ ಮೇಲೆ ಬರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ವಾಹನ ಚಲಾಯಿಸಲು ಡಿ ಎಲ್ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಗಂಡನ ವಾಹನಕ್ಕೆ ವಿಮೆ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಗಂಡನಿಗೆ ವಾಹನ ಚಲಾಯಿಸಲು ಡಿಎಲ್ ಇರಲಿಲ್ಲ ಮತ್ತು ವಾಹನಕ್ಕೆ ವಿಮೆ ಇರದೇ ಇದ್ದರೂ ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಅರ್ಜಿದಾರರಿಗೆ 30 ವರ್ಷ ವಯಸ್ಸು ಇರುತ್ತದೆ. 2 ನೇ ಅರ್ಜಿದಾರರು ನನ್ನ ಗಂಡನಿಗೆ ಡಿಎಲ್ ಇರುವ ಬಗ್ಗೆ ಮತ್ತು ವಾಹನಕ್ಕೆ ವಿಮೆ ಇರುವ ಬಗ್ಗೆ ಹುಡುಕಾಡಿ ಕೊಡಬಹುದಾಗಿತ್ತು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ.

ಅಪಘಾತವನ್ನು ಯಾರು ಪ್ರತ್ಯಕ್ಷವಾಗಿ ನೋಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಅಪಘಾತವನ್ನು ನೋಡಿದವರು ನನ್ನ ಗಂಡನ ಮೊಬೈಲ ತೆಗೆದುಕೊಂಡು ನನ್ನ ಮಗನಿಗೆ ಪೊನ ಮಾಡಿದ್ದರು ಎಂದು ಹೇಳುತ್ತಾರೆ. ನಾನು ನನ್ನ ಗಂಡನನ್ನು ಸರಕಾರಿ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ನಾನು ಆಸ್ಪತ್ರೆಗೆ ಹೋದಾಗ ನನ್ನ ಗಂಡ ಜೀವಂತ ಇರಲಿಲ್ಲ. ನನ್ನ ಗಂಡನ ತಲೆಯ ಹಿಂಬಾಗಕ್ಕೆ ಪೆಟ್ಟಾಗಿತ್ತು. ನನ್ನ ಗಂಡ ಅವರಿಗೆ ಯಾವಾಗಲಾದರೂ ತೊಂದರೆಯಾದಾಗ ಅಥವಾ ಬೇಜಾರಾದಾಗ ಕುಡಿಯುತ್ತಿದ್ದರು ಎಂದರೆ ಸರಿಯಲ್ಲ. ಅಪಘಾತವಾದ ದಿನ ನನ್ನ ಗಂಡ ಅನ್ನಪೂರ್ಣ ಬಾರ ನಲ್ಲಿ ಸಿಕ್ಕಾಪಟ್ಟೆ ಕುಡಿದು ವಾಹನವನ್ನು ಚಲಾಯಿಸುತ್ತಿದ್ದ ಎಂದರೆ

ಸರಿಯಲ್ಲ. ಬಾರ್ ನಲ್ಲಿ ಇದ್ದ ಜನ ನನ್ನ ಗಂಡನಿಗೆ ವಾಹನವನ್ನು ಚಲಾಯಿಸಬೇಡ ಎಂದು ಹೇಳಿದ್ದರೂ ಕೂಡ ಅವನು ಅವರ ಮಾತು ಮೀರಿ ವಾಹನವನ್ನು ಚಲಾಯಿಸಿದ್ದ ಎಂದರೆ ಸರಿಯಲ್ಲ. ಎದುರುದಾರರು ಇಲಕಲ್ಲಗೆ ಬರುತ್ತಿದ್ದರು ಎಂದರೆ ಸರಿ. ಎದುರುದಾರರು ತಮ್ಮ ವಾಹನವನ್ನು ನಿಧಾನವಾಗಿ ಚಲಾಯಿಸಿಕೊಂಡು ಬರುತ್ತಿದ್ದಾಗ ನನ್ನ ಗಂಡ ವೇಗವಾಗಿ ವಾಹನವನ್ನು ಚಲಾಯಿಸಿಕೊಂಡು ಬಂದು ಅಪಘಾತ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡ ವೇಗವಾಗಿ ವಾಹನವನ್ನು ಚಲಾಯಿಸಿಕೊಂಡು ಬಂದು ಅಪಘಾತ ಪಡಿಸಿದ್ದರಿಂದ ಎದುರುದಾರರ ಕೈ ಮತ್ತು ಕಾಲು ಮುರಿದಿರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡನ ತಪ್ಪಿನಿಂದ ಅಪಘಾತ ಸಂಭವಿಸಿರುತ್ತದೆ ಎಂದರೆ ಸಾಕ್ಷಿದಾರರು ಎದುರುದಾರರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಹೇಳುತ್ತಾರೆ. ಎದುರುದಾರರು ಸುಮಾರು 6 ತಿಂಗಳ ಕಾಲ ಪಾಟೀಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಎದುರುದಾರರು ನನ್ನ ಗಂಡನ ತಪ್ಪಿನಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದು, ಅವರಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದು ಎದುರುದಾರರ ಮೇಲೆ ಸುಳ್ಳು ಪ್ರಕರಣವನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಗಂಡ ತನ್ನ ತಪ್ಪಿನಿಂದ ತೀರಿಕೊಂಡಿದ್ದರಿಂದ ಎದುರುದಾರರು ಪರಿಹಾರ ಕೊಡುವ ಪ್ರಶ್ನೇಯೇ ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡಿದ್ದಾನೆ ಎಂದು ಪೋಲಿಸರು ಎದುರುದಾರರ ಮೇಲೆಸುಳ್ಳು ಪ್ರಕರಣವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಪಡೆದುಕೊಳ್ಳಬೇಕೆಂದು ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಬಂದು ಸುಳ್ಳು ಪ್ರಕರಣವನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಎದುರುದಾರರ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.